OBITUARY REFERENCES

MADAM SPEAKER.—Before we commence the business, I regret to make a reference to the sad demise of the following Ex-Members of Mysore Legislative Assembly, Legislative Council and Representative Assembly :

Sriyuths :

1. Syed Esa, Ex-M.L.A.
2. D. T. Seetharama Rao, Ex-M.L.A.
3. H. B. Gundappa Gouda, Ex-Chairman, Legislative Council.
4. G. V. Hallikeri, Chairman, Legislative Council.
5. T. Madiah Gowda, Ex-M.L.A. and Ex-M.L.C.
6. S. Channaiah, Ex-M.L.A. and Ex-M.L.C.
7. T. Subramanya, Ex-M.L.A., Ex-M.L.C.
8. C. H. Lingadevaru, Ex-M.L.A.
9. A. J. Doddameti, Ex-M.L.A.
10. M. P. Krishnamurthi Rao, Ex-Member, Representative Assembly.
11. M. P. Somashekara Rao, Ex-Member Representative Assembly.
12. N. Veeraraj Urs, Ex-Member, Representative Assembly.
13. M. A. Kaliq, Ex-Member, Representative Assembly.
14. A. G. Ramaiah Reddy, Ex-Member Representative Assembly.
15. H. Siddananjappa, Ex-M.L.A. and Ex-Member of Lok Sabha.

I request the hon'ble Members to stand in silence for two minutes as a mark of respect to the deceased,

The hon'ble Members stood in silence for two minutes

SPEAKER'S REPORT

MADAM SPEAKER.—As required by Rule 18 (1) of Assembly Rules I report to the House that the Governor was pleased to address the Legislature on Friday, 24th March 1972 and I place a copy of the Address on the Table of the House.

Address of the Governor of Mysore to the State Legislature

HONOURABLE MEMBERS OF THE LEGISLATURE,

It is my privilege to extend to you a very warm welcome on the occasion of my first address to the joint session of the Houses of Legislature. This occasion also marks the termination of the President's Rule in the State of Mysore and the installation of a democratically elected Government after a period of nearly twelve months. The elections to the State Assembly reflecting the wishes of the people of the State have been held, by and large, without serious incidents.

I am sure the Honourable Members will join me in extending our warm and sincere congratulations to the brave people of Bangla Desh on their unparallelled heroic fight against the forces of tyranny. We can look back with a sense of satisfaction that it was given to us to go to their aid in defence of human freedom under the inspiring leadership of our beloved Prime Minister Smt. Indira Gandhi.

I should like to take this opportunity to pay a tribute to the courage of our Armed Forces who have so successfully defended our motherland against a sudden and unprovoked attack. It is our duty to recognise their services in a befitting manner. In the wake of the National Emergency, in addition to efforts for securing contributions to the National Defence Fund, instructions have been issued regarding the grant of cash relief, land legal assistance, medical facilities and

educational concessions to serving personnel, disabled jawans and the families of those killed in action. Government will continue to pay special attention to the rehabilitation of disabled and other ex-servicemen.

My Government have just assumed office and in the context of their socio-economic objectives, will examine the various measures and schemes, either on the anvil or in the process of implementation, and in due course, place them before you with such modifications as may be required.

The regular budget for the year 1972-73 will be presented to this House some time in June 1972. This budget would reflect the activities of Government and the resources in detail. Meanwhile, the main business of this Session will be consideration of the interim budget for the year 1972-73 in order to obtain a vote on account.

Kannada as Official Language

Kannada has already been made the official language in the administration at taluk and sub-division levels. Its extension to higher levels has been examined by a Special Committee. Government will give their earnest consideration to the recommendations of the Committee and issue appropriate orders expeditiously.

Law and Order

With the exception of the recent unfortunate disturbances at Gulbarga and a few incidents elsewhere,

the Law and Order situation has, on the whole, been satisfactory. The Police force has been strengthened by a small increase in the armed reserve. It will also be provided with more modern equipment and other facilities to make it more effective in the prevention and detection of crime and the maintenance of public order.

Seasonal Conditions and Relief Measures

During 1971-72, as a result of a widespread draught, scarcity conditions appeared in many districts affecting in varying degrees 106 taluks. In undertaking relief measures, works of lasting benefit have been selected and full use has been made of existing schemes for minor irrigation, afforestation and soil conservation. The Government of India have offered to make available for relief measures a sum of Rs. 5.49 crores, out of which Rs. 3.00 crores have been already released.

Land Reforms and Revenue Administration

A National policy providing for lower ceilings on agricultural holdings has been enunciated, based on the recommendations of the Central Land Reforms Committee. In the light of these recommendations the land reforms law in the State is proposed to be amended suitably. The imposition of ceilings on urban property will also be taken up.

The work of bringing the Record of Rights up-to-date and the issue of patta books will be speeded up

so that every ryot will have a current title deed to enable him to get easy credit from Co-operative and other financial institutions.

In order to expedite the disposal of Government waste lands, Special Assistant Commissioners have been appointed in seven districts of the State to attend exclusively to this work. Fifty per cent of the land to be granted will be earmarked in favour of Scheduled Castes and Scheduled Tribes. Specific areas will be reserved for Ex-servicemen and their families to whom it is proposed to grant the land free of cost. It is also proposed to lower the ceiling for the grant of land under 'unauthorised occupation' to eligible persons so that encroachers could be eliminated from excess areas which would then become available for distribution to landless persons and poor farmers.

Unemployment and Remedial Measures

The problem of educated unemployed is causing concern. A beginning has been made in tackling this problem by providing employment and practical training to a limited number of engineering graduates and diploma holders as well as to graduates in Arts, Science and Commerce. A more practical bias is being given to technical education in Polytechnics. Increasing employment in rural areas and strengthening the forces of agricultural production will also be necessary. In addition to the existing Draught Prone Affected Areas Programme, a Crash Scheme for Rural Employment designed to provide employment to about

1,000 persons in every district of the State for 10 months in the year, has been initiated. Projects under the scheme are being implemented by the Taluk Boards and the Land Army. The pace of implementation will be accelerated.

Planning

The Annual Plan for 1972-73 has been fixed at Rs. 72.3 crores excluding the Centrally sponsored and Central Schemes. In order to rectify certain inter-sectoral imbalances observed during the mid-term appraisal, emphasis will be laid in the remaining years of the fourth plan on agricultural production, rural electrification, rural and urban water supply and the welfare of backward classes.

Agriculture

More attention will be paid to the problems of small farmers and marginal farmers and to the activation of the agencies already created for this purpose.

In spite of a number of irrigation projects, a large area in the State will continue to be covered by dry farming. It will, therefore, be necessary to step up to a considerable extent the soil conservation programme, the benefits of which are already beginning to be seen.

The sinking of 20,000 new irrigation wells has been programmed and an equal number will also be energised by the Mysore State Electricity Board.

Extension services for the supply of seeds, fertilisers, pesticides, tractors, and other inputs will also be made available.

The World Bank has approved a project providing a credit of the order of 40 Million Dollars over a period of three years for minor irrigation, land reclamation and supply of agricultural equipment.

A target of Rs. 43 crores has been fixed for short and medium term agricultural credit through co-operative institutions. In addition, it is expected that the commercial banks will also afford credit to farmers in a larger measure during the next year. The long term requirements of agricultural finance will be met by the Land Development Banks to the extent of approximately Rs. 15 crores.

Marketing and Co-operation

A comprehensive agricultural marketing project for the development of regulated markets in the State has been prepared. The project has been forwarded to the Government of India for securing the assistance of the World Bank for its implementation.

The co-operative audit will be strengthened and reorganised and steps will be taken to eradicate the shortcomings that have developed in the system.

Forests

The gradual depletion of our forest wealth over the past 20 years is a matter which requires urgent

attention. Government's policy of afforestation will be reoriented to the production not only of teak, eucalyptus and other commercial soft woods but the re-planting programme will take into account fuel as well as industrial requirements.

Fisheries

A project for the development of the Offshore and Deep Sea fishing industry of the Mysore coast and all-round fisheries development in the State is being prepared. A phased programme of construction and operation of 370 medium sized boats is expected to be implemented by the two Co-operative Fish Marketing Federations. Besides, a project for introducing medium and large sized fishing vessels with the necessary infra-structure is also under consideration. Government propose to regulate the activities of the fishing industry in order to conserve and exploit more systematically the fish wealth in coastal areas.

Housing and Slum Clearance

The Housing Board will expand its programme under various schemes. Particular attention will be given to rural housing, especially for those whose homes will be submerged in major irrigation reservoirs.

The problem of eradication of slums will be tackled. A slum clearance scheme at a cost of Rs. 124 lakhs covering 3,300 families has been formulated and the Government of India have been requested to provide financial assistance for its implementation.

Rural and Urban Water Supply

A little over a thousand villages are yet to be given drinking water facilities. It is expected that they will all be provided with this facility by the end of the Fourth Plan period. Works taken up under National Rural Water Supply and Urban Water Supply schemes are in various stages of progress. Every effort will be made to complete these works as expeditiously as possible.

Irrigation

A co-ordinated plan has been drawn up in respect of irrigation projects in order that funds may be allocated and work organised in such a manner that partial benefits at least will begin to accrue as soon as possible. Ghataprabha, Malaprabha, Kabini and Hemavathi Projects are making good progress. Their progress will be accelerated. The work on Gundal, Taraka and Hathikoni projects has also been taken up.

Power

The total installed generating capacity of power has been raised from 877.50 megawatts to 966.6 megawatts with the commissioning of the 8th unit of the Sharavathi Valley Project this year. The 9th and 10th generators are expected to be commissioned in 1974. The first phase of the Kalinadi Hydro-Electric Project consisting of 2 units of 135 megawatts each, is under execution and power from this project is expected to

flow into the grid system from 1976. Efforts will be made to obtain sufficient resources to complete quickly the Kalinadi Project. The rural electrification programme is being stepped up, and the targets already set for the coming year will be achieved.

Communications

It will be necessary further to improve road communications to facilitate the movement of persons and goods. The outlay on National Highways is being stepped up. Greater emphasis will be laid on the construction of over/under bridges in lieu of level-crossings.

Family Planning Programme

Effective control over the growth of population must receive high priority. Five districts in the State have been selected for an intensive family planning programme under the India Population Project. The scheme is expected to be finalised shortly and its implementation initiated in the coming year. Under this scheme, additional buildings for Maternity Hospitals, Urban Family Welfare Centres, Training Institutions, additional inpatient accommodation and equipment will be provided.

Social Welfare

A larger provision for the welfare of the Scheduled Castes and Scheduled Tribes will be made during the next 12 months. A scheme for financial assistance for

payment of initial share fee, admission fee, investigation fee, etc., to the members of the Scheduled Castes and Scheduled Tribes to enable them to become members of the Primary Land Development Banks and Primary Credit and Agricultural Co-operative Societies and to obtain loans for irrigation and for irrigation pumpsets has been sanctioned.

Education and Youth Services

Primary education is compulsory and it will be the endeavour of Government to achieve 100 per cent enrolment within the next two years. More attention will be paid to the teaching of science at both the primary and secondary stages. The scheme of mid-day meals for primary school children will be supplemented by a World Focd Programme for secondary schools. Further assistance will be given to the Universities for the publication of text books in Kannada.

An Institute of Management supported by the Government of India and the State Government offering post-graduate courses in management education, as also an Institute for Social and Economic Change will be set up at Bangalore.

Play fields and other open spaces in the State are being constantly encroached upon. In view of the necessity for providing adequate opportunities for physical education and sports, the introduction of legislation for the preservation of play fields and other open spaces will be considered. In addition to assisance for youth activities in educational institutions,

it is proposed to establish a net-work of centres for promoting programmes for non-student youth.

Industry

In pursuance of the policy of self-reliance, it is imperative that the installed industrial capacity in Government Undertakings should be utilised to the fullest extent possible. Government will take appropriate steps to improve the working of the State Industrial Undertakings in this direction.

New incentives have been recently given to entrepreneurs for starting industries in the eleven backward districts of the State. Additional incentives have been sanctioned in the case of Raichur district. The construction of a fertiliser plant at Mangalore is expected to begin shortly. A letter of intent has been issued by the Government of India for the setting up of a nylon plant in the State.

A crash programme for the development of Sericulture, sanctioned by the Government of India will be implemented over a period of ten years. This programme will enable the industry to more than double its out-put of raw-silk and to concentrate on improved varieties.

Financial position of the State

The Honourable Members are aware that the award of the Fifth Finance Commission was unfavourable to

the State. On a consideration of the State Government's memorandum urging for a review of the overall deficit of the State and grant of additional assistance for both plan and non-plan expenditure, the Government of India came to the conclusion that a measure of special accommodation during the Fourth Plan period would have to be provided. The actual annual releases of special accommodation have, however, not been adequate to meet the needs of the State. The State has achieved the target fixed for additional Resource mobilisation. The increase in normal revenues though substantial could not cover the normal increase in expenditure, expenditure on Irrigation Projects pending clearance and the inevitable increases in emoluments of employees. There has been an additional burden on debt repayment amounting to Rs. 45 crores over the whole plan period and this has aggravated our problems. The additional resources raised have not been adequate to cover the deficit. In these circumstances, it is necessary that Mysore's case for special accommodation receives sympathetic consideration of the Government of India, so that the State Government may be able to deal with the overdraft effectively.

The Government of India have been voicing their general concern about the growing overdrafts of the States including Mysore. This is a problem which calls for a realistic approach and any formula applied will have to take into account the particular circumstances in each State. While the State Government will play their part fully and co-operate with the Government of

India in their efforts to enforce financial discipline, they will urge the Government of India to take note of their real difficulties.

Further mobilisation of resources will be inevitable if the present tempo of development is to be maintained.

Government are fully aware of the need for controlling expenditure. Certain economy measures have already been enforced. A one-man Economy Committee has been appointed to make a quick study of administrative costs and to suggest how real economies can be achieved.

Legislation

The following measures have been enacted as President's Acts :—

1. The Mysore Entertainments (Amendment) Act, 1971 (President's Act 14 of 1971).
2. The Mysore Motor Vehicles (Taxation on Passengers and Goods) (Amendment) Act, 1971 (President's Act 15 of 1971).
3. The Mysore Motor Vehicles Taxation (Amendment) Act, 1971 (President's Act 16 of 1971).
4. The Mysore Stamp (Amendment) Act, 1971 (President's Act 17 of 1971).
5. The Mysore Sales Tax (Amendment) Act, 1971 (President's Act 18 of 1971).
6. The Mysore Co-operative Societies (Amendment) Act, 1972 (President's Act 1 of 1972).

Bills to replace such of them as are necessary will be placed before you in due course.

The recent happenings in the country have vindicated the soundness of the principles of democracy, secularism and socialism to which our Nation stands committed. It should be the endeavour of all concerned to work ceaselessly towards the attainment of these ideals through the implementation of appropriate socio-economic programmes based on self-reliance so that poverty may be banished, disparities reduced and injustice put an end to.

I wish you success in your deliberations and in your efforts to achieve the ideals we cherish and to work for the continued progress and prosperity of the people of the State.

ಮೈಸೂರು ರಾಜ್ಯಪಾಲರು ರಾಜ್ಯದ ವಿಧಾನಮಂಡಲದಲ್ಲಿ ನೀಡಿದ ಭಾಷಣ

ವಿಧಾನಮಂಡಲದ ಸದಸ್ಯ ಮಹಾಶಯರೆ,

ವಿಧಾನಮಂಡಲ ಸದನಗಳ ಸಂಯುಕ್ತ ಅಧಿವೇಶನದಲ್ಲಿ ಮೊದಲ ಸಲ ಭಾಷಣ ಮಾಡುವ ಈ ಸಂದರ್ಭದಲ್ಲಿ ನಾನು ನಿಮಗೆಲ್ಲ ಹಾರ್ದಿಕ ಸ್ವಾಗತ ಬಯಸುತ್ತೇನೆ. ಮೈಸೂರು ರಾಜ್ಯದಲ್ಲಿ ಸುಮಾರು ಹನ್ನೆರಡು ತಿಂಗಳ ಕಾಲ ನಡೆದ ರಾಷ್ಟ್ರಪತಿ ಆಡಳಿತ ಕೊನೆಗೊಂಡು, ಪ್ರಜಾಪ್ರಭುತ್ವಕ್ಕೆ ಅನುಸಾರವಾಗಿ ಚುನಾಯಿತವಾದ ಸರ್ಕಾರ ಸ್ಥಾಪನೆಯಾಗಿದೆ. ಜನತೆಯ ಬಯಕೆಗಳನ್ನು ಪ್ರತಿಬಿಂಬಿಸುವ ರಾಜ್ಯ ವಿಧಾನಸಭಾ ಚುನಾವಣೆಗಳು ಸಾಮಾನ್ಯವಾಗಿ ಅಹಿತಕರ ಘಟನೆಗಳೇನೂ ಸಂಭವಿಸದೆ ಜರುಗಿವೆ.

ದಬ್ಬಾಳಿಕೆಯ ಶಕ್ತಿಗಳ ವಿರುದ್ಧ ಅಭೂತಪೂರ್ವ ಶೌರ್ಯದಿಂದ ಹೋರಾಡಿದ ಬಾಂಗ್ಲಾದೇಶದ ಧೀರ ಜನತೆಗೆ ಮಾನ್ಯ ಸದಸ್ಯರು ನನ್ನೊಡನೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾರೆಂದು ನಂಬಿದ್ದೇನೆ. ನಮ್ಮ ನೆಚ್ಚಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಸ್ಫೂರ್ತಿದಾಯಕ ನಾಯಕತ್ವದಲ್ಲಿ ಮಾನವ ಸ್ವಾತಂತ್ರ್ಯ ರಕ್ಷಣೆಗಾಗಿ ಬಾಂಗ್ಲಾದೇಶದ ನೆರವಿಗೆ ಹೋಗುವ ಭಾಗ್ಯ ನಮ್ಮದಾಗಿತ್ತೆಂದು ನಾವು ಸಂತೋಷ ಪಟ್ಟುಕೊಳ್ಳಬಹುದಾಗಿದೆ.

ಕಾರಣವಿಲ್ಲದೆ ಹಠಾತ್ತಾಗಿ ಬಂದ ಆಕ್ರಮಣವನ್ನು ಪ್ರತಿಭಟಿಸಿ ಮಾತೃಭೂಮಿಯನ್ನು ಯಶಸ್ವಿಯಾಗಿ ರಕ್ಷಿಸಿದ ನಮ್ಮ ಸಶಸ್ತ್ರ ದಳಗಳ ಧೈರ್ಯಶೌರ್ಯಗಳಿಗೆ ಈ ಸಂದರ್ಭದಲ್ಲಿ ಗೌರವ ಸಮರ್ಪಿಸಬಯಸುತ್ತೇನೆ. ಅವರ ಸೇವೆಗೆ ಸೂಕ್ತ ರೀತಿಯಲ್ಲಿ ಮನ್ನಣೆ ಕೊಡುವುದು ನಮ್ಮ ಕರ್ತವ್ಯ. ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಘೋಷಣೆಯಾದ ಮೇಲೆ ರಾಷ್ಟ್ರೀಯ ರಕ್ಷಣಾನಿಧಿಗೆ ವಂತಿಗೆ ಸಂಗ್ರಹಿಸುವ ಕೆಲಸದ ಜೊತೆಗೆ ಸೈನ್ಯ ಸೇವೆಯಲ್ಲಿರುವವರಿಗೂ, ಅಂಗವಿಕಲ ಜವಾನರಿಗೂ, ಯುದ್ಧದಲ್ಲಿ ಮೃತರಾದವರ ಕುಟುಂಬಗಳಿಗೂ ನಗದುಪರಿಹಾರ, ಭೂಮಿ, ಕಾನೂನು ನೆರವು, ವೈದ್ಯಕೀಯ ಸೌಕರ್ಯ, ಶಿಕ್ಷಣ ಸೌಲಭ್ಯ ಮುಂತಾದವುಗಳನ್ನು ಒದಗಿಸಬೇಕೆಂದು ಸೂಕ್ತ ನಿರ್ದೇಶಗಳನ್ನು ಹೊರಡಿಸಲಾಗಿದೆ. ಅಂಗವಿಕಲರ ಮತ್ತು ಇತರ ಮಾಜಿ ಸೈನಿಕರ ಪುನಸ್ಸಜ್ಜೀಕರಣಕ್ಕೆ ಸರ್ಕಾರದವರು ವಿಶೇಷ ಗಮನ ಕೊಡುತ್ತಲಿದ್ದಾರೆ.

ಈಗ ತಾನೆ ಅಧಿಕಾರ ವಹಿಸಿಕೊಂಡಿರುವ ನಮ್ಮ ಸರ್ಕಾರದವರು ಈಗ ಸಿದ್ಧವಾಗುತ್ತಿರುವ ಇಲ್ಲವೆ ಈಗಾಗಲೇ ಕಾರ್ಯರೂಪಕ್ಕೆ ಬರುತ್ತಿರುವ ನಾನಾ ಪರ್ಪಾಡುಗಳನ್ನು ಹಾಗೂ ಯೋಜನೆಗಳನ್ನು ತಮ್ಮ ಆರ್ಥಿಕ-ಸಾಮಾಜಿಕ ಧ್ಯೇಯಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕಾಲಕ್ರಮದಲ್ಲಿ, ಸೂಕ್ತ ಮಾರ್ಪಾಡುಗಳೊಡನೆ ನಿಮ್ಮ ಮುಂದೆ ಮಂಡಿಸಲಿದ್ದಾರೆ.

1972–73ನೇ ವರ್ಷಕ್ಕೆ ಕ್ರಮಬದ್ಧವಾದ ಆಯವ್ಯಯ ಪತ್ರವನ್ನು ಸುಮಾರು ಜೂನ್ 1972ರಲ್ಲಿ ಈ ಸದನದ ಮುಂದೆ ಮಂಡಿಸಲಾಗುವುದು. ಈ ಆಯವ್ಯಯ ಪತ್ರದಲ್ಲಿ ಸರ್ಕಾರದ ಕಾರ್ಯಕಲಾಪಗಳನ್ನೂ, ಸಂಪನ್ಮೂಲಗಳನ್ನೂ ಸವಿವರವಾಗಿ ಸೂಚಿಸಲಾಗುವುದು. ಈ ಮಧ್ಯೆ ಲೇಖಾನುದಾನ (ವೋಟ್ ಆನ್ ಅಕೌಂಟ್) ಪಡೆಯುವ ನಿಮಿತ್ತ 1972–73ನೇ ವರ್ಷಕ್ಕಾಗಿ ಒಂದು ತಾತ್ಕಾಲಿಕ ಆಯವ್ಯಯ ಪತ್ರವನ್ನು ಪರಿಶೀಲಿಸುವುದು ಈ ಅಧಿವೇಶನದ ಮುಖ್ಯ ಕೆಲಸ.

ಅಧಿಕೃತ ಭಾಷೆಯಾಗಿ ಕನ್ನಡ

ತಾಲೂಕು ಮತ್ತು ಉಪವಿಭಾಗ ಮಟ್ಟಗಳ ಆಡಳಿತದಲ್ಲಿ ಕನ್ನಡವು ಈಗಾಗಲೇ ಅಧಿಕೃತ ಭಾಷೆಯಾಗಿದೆ. ಕನ್ನಡದ ಬಳಕೆಯನ್ನು ಇನ್ನೂ ಮೇಲ್ಮಟ್ಟಗಳಿಗೆ ವಿಸ್ತರಿಸುವ ವಿಚಾರವನ್ನು ಒಂದು ವಿಶೇಷ ಸಮಿತಿ ಪರಿಶೀಲಿಸಿದೆ. ಈ ಸಮಿತಿಯ ಶಿಫಾರಸುಗಳನ್ನು ಸರ್ಕಾರದವರು ತೀವ್ರವಾಗಿ ಪರಿಶೀಲಿಸಿ, ಸೂಕ್ತ ಆದೇಶಗಳನ್ನು ತ್ವರಿತವಾಗಿ ಹೊರಡಿಸಲಿದ್ದಾರೆ.

ಶಾಸನ ಸುವ್ಯವಸ್ಥೆ

ಈಚೆಗೆ ಗುಲಬರ್ಗದಲ್ಲಿ ನಡೆದ ದುರದೃಷ್ಟಕರ ಘಟನೆಗಳನ್ನೂ, ಬೇರೆಕಡೆ ಸಂಭವಿಸಿದ ಕೆಲವಾರು ಘಟನೆಗಳನ್ನೂ ಬಿಟ್ಟರೆ, ಶಾಸನ ಸುವ್ಯವಸ್ಥೆಯ ಸ್ಥಿತಿ ಸರ್ವಸಾಮಾನ್ಯವಾಗಿ ಸಮಾಧಾನಕರವಾಗಿಯೇ ಇತ್ತು. ಸಶಸ್ತ್ರ ಮಿಸಲು ಪಡೆಯನ್ನು ಕೊಂಚ ಹೆಚ್ಚಿಸಿ ಪೊಲೀಸು ದಳವನ್ನು ಬಲಪಡಿಸಿದೆ. ಅಪರಾಧದ ನಿವಾರಣೆ ಹಾಗೂ ಶೋಧನೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಪಾಲನೆ—ಈ ವಿಚಾರಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಪೊಲೀಸು ಪಡೆಗೆ ಆಧುನಿಕ ಸಜ್ಜುಸಲಕರಣೆಗಳನ್ನೂ ಬೇರೆ ಸೌಲಭ್ಯಗಳನ್ನೂ ಒದಗಿಸಲಾಗುವುದು.

ಋತುಮಾನ ಸ್ಥಿತಿ ಮತ್ತು ಪರಿಹಾರ ಕಾರ್ಯ

1971-72ರಲ್ಲಿ ಎಲ್ಲೆಡೆಗಳಲ್ಲೂ ಬರಗಾಲವಿದ್ದ ಕಾರಣ, ಅನೇಕ ಜಿಲ್ಲೆಗಳಲ್ಲಿ ಅಭಾವ ಸ್ಥಿತಿ ತಲೆದೋರಿತು. ನೂರ ಆರು ತಾಲ್ಲೂಕುಗಳು ನಾನಾ ಪ್ರಮಾಣದಲ್ಲಿ ಸಂಕಟಕ್ಕೆ ಗುರಿಯಾದುವು. ಪರಿಹಾರ ಕಾರ್ಯಗಳನ್ನು ಕೈಕೊಳ್ಳುವಾಗ, ಶಾಶ್ವತ ಪ್ರಯೋಜನ ತರುವ ಕಾಮಗಾರಿಗಳನ್ನು ಆರಿಸಿಕೊಂಡಿದೆ ; ಚಿಕ್ಕಪುಟ್ಟ ನೀರಾವರಿ ವನನಿರ್ಮಾಣ, ಭೂಸಾರ ರಕ್ಷಣೆ ಮುಂತಾದ ಯೋಜನೆಗಳನ್ನು ಪೂರ್ತಿಯಾಗಿ ಬಳಸಿ ಕೊಳ್ಳಲಾಗಿದೆ. ಪರಿಹಾರ ಕಾಮಗಾರಿಗಳಿಗಾಗಿ ಭಾರತ ಸರ್ಕಾರದವರು 5.49 ಕೋಟಿ ರೂಪಾಯಿ ನೆರವು ನೀಡುವುದಾಗಿ ಹೇಳಿದ್ದಾರೆ. ಇದರ ಪೈಕಿ 3.00 ಕೋಟಿ ರೂಪಾಯಿಯನ್ನು ಈಗಾಗಲೇ ನೀಡಲಾಗಿದೆ.

ಭೂ ಸುಧಾರಣೆ ಮತ್ತು ರೆವಿನ್ಯೂ ಆಡಳಿತ

ಕೇಂದ್ರ ಭೂಸುಧಾರಣಾ ಸಮಿತಿಯ ಶಿಫಾರಸುಗಳನ್ನು ಆಧಾರವಾಗಿಟ್ಟು ಕೊಂಡು, ಕೃಷಿ ಹಿಡುವಳಿಗಳ ಗರಿಷ್ಠ ಪರಿಮಿತಿಗಳನ್ನು ತಗ್ಗಿಸುವ ಬಗ್ಗೆ ಒಂದು ರಾಷ್ಟ್ರೀಯ ಕಾರ್ಯನೀತಿಯನ್ನು ನಿರೂಪಿಸಲಾಗಿದೆ. ಈ ಶಿಫಾರಸುಗಳ ಆಧಾರದ ಮೇಲೆ, ರಾಜ್ಯದ ಭೂಸುಧಾರಣಾ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಉದ್ದೇಶವಿದೆ. ನಗರ ಸೊತ್ತಿನ ಮೇಲೆ ಗರಿಷ್ಠ ಮಿತಿಯನ್ನು ವಿಧಿಸುವ ಕೆಲಸವನ್ನು ಕೂಡ ಕೈಕೊಳ್ಳಲಾಗುವುದು.

ಪ್ರತಿಯೊಬ್ಬ ರೈತನೂ ಚಾಲ್ತಿ ಹಕ್ಕುಪತ್ರ ಪಡೆಯುವಂತಾಗಿ ಸಹಕಾರಿ ಮತ್ತಿತರ ಆರ್ಥಿಕ ಸಂಸ್ಥೆಗಳಿಂದ ಸುಲಭವಾಗಿ ಸಾಲ ಪಡೆಯಲು ಅನುಕೂಲ ವಾಗುವಂತೆ, ಹಕ್ಕು ದಾಖಲಾತಿ ಪತ್ರಗಳನ್ನು ಇಂದಿನವರೆಗೆ ಪೂರ್ಣವಾಗಿ ಬರೆದು ಪಟ್ಟಾ ಪುಸ್ತಕ ನೀಡುವ ಕೆಲಸವನ್ನು ತ್ವರಿತಗೊಳಿಸಲಾಗುವುದು.

ಸರ್ಕಾರಿ ಬಂಜರು ಭೂಮಿಗಳ ವಿಲೇವಾರಿಯನ್ನು ತ್ವರಿತಗೊಳಿಸಲು, ರಾಜ್ಯದ ಏಳು ಜಿಲ್ಲೆಗಳಲ್ಲಿ ಈ ಕೆಲಸಕ್ಕಾಗಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಿಸ ಲಾಗಿದೆ. ನೀಡಲಿರುವ ಭೂಮಿಯ ಅರ್ಧಾಂಶ ಭಾಗವು ಹರಿಜನ ಗಿರಿಜನರಿಗೇ ಮೀಸಲು. ಮಾಜಿ ಸೈನಿಕರಿಗೂ ಅವರ ಕುಟುಂಬಗಳಿಗೂ ನಿರ್ದಿಷ್ಟ ಪ್ರದೇಶ ಗಳನ್ನು ಮೀಸಲಿಡಲಾಗಿದೆ. ಅವರಿಗೆ ಉಚಿತವಾಗಿ ಭೂಮಿ ಕೊಡಲಾಗುವುದು. ಅಲ್ಲದೆ, ಅನಧಿಕೃತ ಅನುಭವದಲ್ಲಿರುವ ಭೂಮಿಯನ್ನು ಅರ್ಹವ್ಯಕ್ತಿಗಳಿಗೆ ಕೊಡುಗೆ ಯಾಗಿ ನೀಡುವಾಗ ಅವರ ಗರಿಷ್ಠ ಮಿತಿಯನ್ನು ತಗ್ಗಿಸುವ ಉದ್ದೇಶವಿದೆ. ಇದರಿಂದ ಆ ಅತಿಕ್ರಮಣಕಾರರನ್ನು ಹೆಚ್ಚುವರಿ ಪ್ರದೇಶಗಳಿಂದ ಹೊರಡಿಸಲು ಅನುಕೂಲ. ಆಗ ಅಂಥ ಹೆಚ್ಚುವರಿ ಜಮೀನು ಭೂ ರಹಿತರಿಗೆ ಹಾಗೂ ಬಡ ರೈತರಿಗೆ ಹಂಚಲು ದೊರೆಯುವುದು.

ನಿರುದ್ಯೋಗ ಮತ್ತು ಪರಿಹಾರ ವ್ಯವಸ್ಥೆ

ಸುಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆಯು ಚಿಂತೆಗೆ ಕಾರಣವಾಗಿದೆ, ಪರಿಮಿತ ಸಂಖ್ಯೆಯ ಇಂಜಿನಿಯರ್ ಪದವೀಧರರಿಗೆ ಮತ್ತು ಡಿಪ್ಲೊಮಾಧಾರಕರಿಗೆ ಹಾಗೂ ಆರ್ಟ್ಸ್, ಸಾಯಿನ್ಸ್, ಮತ್ತು ಕಾಮರ್ಸ್ ಪದವೀಧರರಿಗೆ ಉದ್ಯೋಗವನ್ನೂ ವ್ಯಾವಹಾರಿಕ ತರಬೇತಿಯನ್ನೂ ಒದಗಿಸಿ, ಈ ಸಮಸ್ಯೆಯನ್ನು ಬಗೆಹರಿಸುವ ದಿಶೆಯಲ್ಲಿ ಮೊದಲ ಹೆಜ್ಜೆ ಇಡಲಾಗಿದೆ. ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ನೀಡುವ ತಾಂತ್ರಿಕ ಶಿಕ್ಷಣದಲ್ಲಿ ವ್ಯಾವಹಾರಿಕ ಪ್ರಯೋಜನ ದೃಷ್ಟಿಯಿಂದ ಬೇಕಾಗುವ ತರಬೇತಿಯನ್ನೂ ಇನ್ನಷ್ಟು ಹೆಚ್ಚಾಗಿ ಒದಗಿಸಲಾಗುತ್ತದೆ. ಇದರ ಜತೆಗೆ, ಹಳ್ಳಿಗಳಲ್ಲಿ ಉದ್ಯೋಗಾವಕಾಶವನ್ನು ಹೆಚ್ಚಿಸಿ ವ್ಯವಸಾಯೋತ್ಪಾದನ ಶಕ್ತಿಗಳನ್ನು ಬಲಪಡಿಸುವುದು ಕೂಡಾ ಅವಶ್ಯ. ಈಗಿನ ಬರಗಾಲ ಪೀಡಿತ ಪ್ರದೇಶಗಳ ಕಾರ್ಯಕ್ರಮದ ಜೊತೆಗೆ, ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ವರ್ಷಕ್ಕೆ 10 ತಿಂಗಳ ಕಾಲ ಸುಮಾರು 1,000 ಜನರಿಗೆ ಉದ್ಯೋಗ ಒದಗಿಸುವಂತೆ ಗ್ರಾಮಾಂತರ ಉದ್ಯೋಗ ನಿರ್ಮಾಣದ ಒಂದು ತೀವ್ರ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಕಾರ್ಯಗಳನ್ನು ತಾಲ್ಲೂಕು ಬೋರ್ಡುಗಳು ಹಾಗೂ ಭೂ ಸೇನೆ ನಿರ್ವಹಿಸುತ್ತವೆ. ಈ ನಿರ್ವಹಣೆಯ ಗತಿಯನ್ನು ತ್ವರಿತಗೊಳಿಸಲಾಗುವುದು.

ಯೋಜನೆ

1972-73ರ ವಾರ್ಷಿಕ ಯೋಜನೆಯ ವೆಚ್ಚವನ್ನು ರೂ. 72.3 ಕೋಟಿ ಎಂದು ನಿಗದಿಪಡಿಸಿದೆ. ಇದರಲ್ಲಿ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳೂ ಕೇಂದ್ರ ಕಾರ್ಯ ಯೋಜನೆಗಳೂ ಸೇರಿಲ್ಲ. ಮಧ್ಯಕಾಲೀನ ಪರಿಶೀಲನೆಯಲ್ಲಿ ಬೇರೆ ಬೇರೆ ವಲಯಗಳೊಳಗೆ ಕಂಡುಬಂದ ಅಸಮತೆಗಳನ್ನು ಸರಿಪಡಿಸಲು ನಾಲ್ಕನೆಯ ಯೋಜನಾವಧಿಯ ಉಳಿದ ವರ್ಷಗಳಲ್ಲಿ ವ್ಯವಸಾಯೋತ್ಪಾದನೆ, ಗ್ರಾಮಾಂತರ ವಿದ್ಯುತ್ ಯೋಜನೆ, ಗ್ರಾಮಾಂತರ ಮತ್ತು ನಗರ ಪ್ರದೇಶಗಳ ನೀರು ಸರಬರಾಜು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಾಧನೆಗೆ ಪ್ರಾಶಸ್ತ್ಯ ಕೊಡಲಾಗಿದೆ.

ವ್ಯವಸಾಯ

ಚಿಕ್ಕಪುಟ್ಟ ರೈತರ ಮತ್ತು ನಾಮಮಾತ್ರ ರೈತರ ಸಮಸ್ಯೆಗಳಿಗೂ ಈ ಉದ್ದೇಶಕ್ಕಾಗಿ ಈಗಾಗಲೇ ಸೃಜಿಸಿದ ಕಾರ್ಯ ಸಂಸ್ಥೆಗಳನ್ನು ಸಕ್ರಿಯಗೊಳಿಸುವುದಕ್ಕೂ ಹೆಚ್ಚಿನ ಗಮನಕೊಡಲಾಗುವುದು.

ಈಗ ಹಲವಾರು ನೀರಾವರಿ ಯೋಜನೆಗಳಿದ್ದರೂ ಕೂಡ, ರಾಜ್ಯದ ಬಹು ಭಾಗದಲ್ಲಿ ಖುಷ್ಕಿ ಬೇಸಾಯವೇ ನಡೆಯುವುದು. ಆದ್ದರಿಂದ ಭೂಸಾರ ರಕ್ಷಣೆಯ ಕಾರ್ಯಕ್ರಮವನ್ನು ಬಹಳವಾಗಿ ತ್ವರೆಗೊಳಿಸುವುದು ಅವಶ್ಯ.

ಇಪ್ಪತ್ತುಸಾವಿರ ಹೊಸ ನೀರಾವರಿ ಬಾವಿಗಳನ್ನು ತೋಡಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅಷ್ಟೇ ಸಂಖ್ಯೆಯ ಬಾವಿಗಳಿಗೆ ಮೈಸೂರು ರಾಜ್ಯದ, ವಿದ್ಯುಚ್ಛಕ್ತಿ ಮಂಡಲಿಯು ವಿದ್ಯುಚ್ಛಕ್ತಿ ಒದಗಿಸಲಿದೆ. ಬೀಜ, ರಾಸಾಯನಿಕ ಗೊಬ್ಬರ ಕೀಟನಾಶಕ, ಟ್ರಾಕ್ಟರು ಮತ್ತು ಇನ್ನಿತರ ಪರಿಕರಗಳ ಸರಬರಾಜಿನ ಬಗ್ಗೆ ಶಿಕ್ಷಣ ಸೇವೆಗಳನ್ನು ಒದಗಿಸಲಾಗುವುದು.

ಚಿಕ್ಕಪುಟ್ಟ ನೀರಾವರಿ ಭೂಮಿಯನ್ನು ಕೃಷಿಯೋಗ್ಯಗೊಳಿಸುವುದು, ಮತ್ತು ಕೃಷಿ ಸಲಕರಣೆಯ ಸರಬರಾಜು—ಇವುಗಳಿಗಾಗಿ ಮೂರು ವರ್ಷದ ಅವಧಿಯಲ್ಲಿ ಸುಮಾರು 40 ದಶಲಕ್ಷ ಡಾಲರು ಸಾಲ ನೀಡುವ ಯೋಜನೆಯೊಂದನ್ನು ವಿಶ್ವಬ್ಯಾಂಕು ಅನುಮೋದಿಸಿದೆ.

ಅಲ್ಪಾವಧಿಯ ಮತ್ತು ಮಧ್ಯಮಾವಧಿಯ ಕೃಷಿ ಸಾಲಕ್ಕೆ ಸಹಕಾರಿ ಸಂಸ್ಥೆಗಳ ಮೂಲಕ 43 ಕೋಟಿ ರೂಪಾಯಿಯನ್ನು ನಿಗದಿ ಮಾಡಲಾಗಿದೆ. ಇದಲ್ಲದೆ, ವಾಣಿಜ್ಯ ಬ್ಯಾಂಕುಗಳು ಕೂಡಾ ಮುಂದಿನ ವರ್ಷ ರೈತರಿಗೆ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಾಲ ಒದಗಿಸುವ ನಿರೀಕ್ಷೆಯಿದೆ. ಕೃಷಿಗೆ ಅವಶ್ಯವಿರುವ ದೀರ್ಘಾವಧಿಯ ಧನ ಸಹಾಯ ರೂಪದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು ಸುಮಾರು 15 ಕೋಟಿ ರೂಪಾಯಿ ಹಣವನ್ನು ಒದಗಿಸಲಿವೆ.

ಮಾರುಕಟ್ಟೆ ವ್ಯವಸ್ಥೆ ಮತ್ತು ಸಹಕಾರ

ರಾಜ್ಯದಲ್ಲಿ ರೆಗ್ಯುಲೇಟೆಡ್ ಮಾರ್ಕೆಟುಗಳ ಅಭಿವೃದ್ಧಿಗಾಗಿ ವ್ಯಾಪಕವಾದ ಕೃಷಿ ಮಾರುಕಟ್ಟೆ ಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ವಿಶ್ವಬ್ಯಾಂಕಿನ ನೆರವು ಪಡೆಯಲು ಅದನ್ನು ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ.

ಸಹಕಾರಿ ಸಂಘಗಳ ಲೆಕ್ಕ ಪರಿಶೋಧನೆಯ ವಿಭಾಗವನ್ನು ಬಲಪಡಿಸಿ ಪುನರ್ವ್ಯವಸ್ಥೆಗೊಳಿಸಲಾಗುವುದು. ಈಗಿನ ಪದ್ಧತಿಯಲ್ಲಿ ತಲೆದೋರಿರುವ ಕುಂದುಕೊರತೆಗಳನ್ನು ನಿವಾರಿಸಲು ಸೂಕ್ತ ಕ್ರಮ ಕೈಕೊಳ್ಳಲಾಗುವುದು.

ಅರಣ್ಯಗಳು

ಕಳೆದ 20 ವರ್ಷಗಳಲ್ಲಿ ನಮ್ಮ ಅರಣ್ಯ ಸಂಪತ್ತು ಕ್ರಮೇಣ ಕ್ಷೀಣಿಸುತ್ತ ಬಂದಿದೆ. ಈ ವಿಷಯಕ್ಕೆ ತ್ವರಿತ ಗಮನಕೊಡಬೇಕಾಗಿದೆ. ತೇಗು, ಯುಕಲಿಪ್ಟಸ್ ಮತ್ತು ಇತರ ವಾಣಿಜ್ಯಾರ್ಥ ಮೆದುಮರಗಳನ್ನು ನೆಡುವುದಕ್ಕೆ ಅನುಕೂಲವಾಗುವಂತೆ ಸರ್ಕಾರದವರ ವನ ನಿರ್ಮಾಣ ನೀತಿಯನ್ನು ಮಾರ್ಪಡಿಸಲಾಗುವುದು. ಅಲ್ಲದೆ, ಮರ ನೆಡುವ ಕಾರ್ಯಕ್ರಮದಲ್ಲಿ ಇಂಧನ ಹಾಗೂ ಕೈಗಾರಿಕೆಯ ಅಗತ್ಯಗಳನ್ನು ಕೂಡಾ ಗಮನಕ್ಕೆ ತೆಗೆದುಕೊಳ್ಳಲಾಗುವುದು.

ಮೀನುಗಾರಿಕೆ

ಮೈಸೂರು ರಾಜ್ಯದ ಕರಾವಳಿಯಲ್ಲಿ, ತೀರ ಸಮೀಪದ ಹಾಗೂ ತೀರ ದೂರದ ಮೀನುಗಾರಿಕೆ ಅಭಿವೃದ್ಧಿಗೂ ರಾಜ್ಯದಲ್ಲಿ ಮೀನುಗಾರಿಕೆಯ ಸರ್ವತೋಮುಖ ಅಭಿವೃದ್ಧಿಗೂ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಎರಡು ಸಹಕಾರಿ ಮೀನು ಮಾರುಕಟ್ಟೆ ಸಂಸ್ಥೆ (ಕೋ-ಆಪರೇಟಿವ್ ಫಿಷ್ ಫೆಡರೇಷನ್)ಗಳು ಮಧ್ಯಮ ಗಾತ್ರದ 370 ದೋಣಿಗಳ ನಿರ್ಮಾಣ ಹಾಗೂ ಅವುಗಳ ಕಾರ್ಯನಿರ್ವಹಣೆಗೆ ಹಂತಹಂತವಾದ ಕಾರ್ಯಕ್ರಮವೊಂದನ್ನು ರೂಪಿಸಿಕೊಂಡು, ಅದನ್ನು ಕಾರ್ಯಗತ ಮಾಡುವ ನಿರೀಕ್ಷೆಯಿದೆ. ಅಲ್ಲದೆ, ಮಧ್ಯಮ ಗಾತ್ರದ ಮತ್ತು ಬಹು ದೊಡ್ಡ ಗಾತ್ರದ ಮೀನು ಹಿಡಿಯುವ ಹಡಗುಗಳನ್ನು ಅಗತ್ಯದ ಹಂದರದೊಡನೆ ಕಟ್ಟಿಸುವ ಯೋಜನೆ ಕೂಡಾ ಪರಿಶೀಲನೆಯಲ್ಲಿದೆ. ತೀರ ಪ್ರದೇಶಗಳ ಮತ್ಸ್ಯ ಸಂಪತ್ತನ್ನು ಸಂರಕ್ಷಿಸಿ ಕೊಂಡು ಅದನ್ನು ಇನ್ನಷ್ಟು ಸುವ್ಯವಸ್ಥಿತವಾಗಿ ಬಳಸುವ ನಿಮಿತ್ತ, ಮೀನುಗಾರಿಕೆ ಉದ್ದಿಮೆಯ ಕಾರ್ಯಕಲಾಪಗಳನ್ನು ಸರ್ಕಾರದವರು ನಿಯಂತ್ರಿಸಬಯಸುತ್ತಾರೆ.

ಗೃಹನಿರ್ಮಾಣ ಮತ್ತು ಕೊಳಚೆ ನಿರ್ಮೂಲನ

ಗೃಹ ನಿರ್ಮಾಣ ಮಂಡಲಿಯವರು ಬೇರೆ ಬೇರೆ ಯೋಜನೆಗಳ ಪ್ರಕಾರ ತಮ್ಮ ಕಾರ್ಯಕ್ರಮವನ್ನು ವಿಸ್ತರಿಸಲಿದ್ದಾರೆ. ಗ್ರಾಮಾಂತರ ಗೃಹನಿರ್ಮಾಣಕ್ಕೆ, ವಿಶೇಷ ವಾಗಿ, ದೊಡ್ಡ ದೊಡ್ಡ ನೀರಾವರಿ ಜಲಾಶಯಗಳಲ್ಲಿ ಮನೆ ಮುಳುಗಡೆಯಾಗುವವರಿಗೆ ಮನೆ ಕಟ್ಟಿಸಿಕೊಡುವ ಕೆಲಸಕ್ಕೆ, ವಿಶೇಷ ಗಮನ ಕೊಡಲಾಗುವುದು.

ಕೊಳಚೆ ನಿರ್ಮೂಲನ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಕೊಳ್ಳ ಲಾಗುವುದು. ಮೂರುಸಾವಿರದ ಮುನ್ನೂರು ಕುಟುಂಬಗಳಿಗೆ ಅನುಕೂಲವಾಗು ವಂತೆ 124 ಲಕ್ಷ ರೂಪಾಯಿ ವೆಚ್ಚದ ಕೊಳಚೆ ನಿರ್ಮೂಲನ ಯೋಜನೆ ಯೊಂದನ್ನು ರೂಪಿಸಲಾಗಿದೆ. ಇದನ್ನು ಕಾರ್ಯರೂಪಕ್ಕೆ ತರಲು ಹಣಸಹಾಯ ನೀಡುವಂತೆ ಭಾರತ ಸರ್ಕಾರದವರನ್ನು ವಿನಂತಿಸಿಕೊಳ್ಳಲಾಗಿದೆ.

ಗ್ರಾಮಾಂತರ ಮತ್ತು ನಗರ ನೀರು ಸರಬರಾಜು ಯೋಜನೆ

ಒಂದು ಸಾವಿರಕ್ಕೂ ಹೆಚ್ಚಿನ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಈಗಲೂ ಇಲ್ಲ. ನಾಲ್ಕನೆಯ ಯೋಜನಾವಧಿಯ ಅಂತ್ಯದೊಳಗಾಗಿ ಆ ಗ್ರಾಮ ಗಳಿಗೆಲ್ಲಾ ಈ ಸೌಲಭ್ಯವನ್ನು ಒದಗಿಸಲಾಗುವುದೆಂಬ ನಿರೀಕ್ಷೆಯಿದೆ. ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಹಾಗೂ ನಗರ ನೀರು ಸರಬರಾಜು ಯೋಜನೆಗಳ ಮೇರೆಗೆ ಕೈಕೊಂಡ ಕಾರ್ಯಕ್ರಮಗಳು ನಾನಾ ಹಂತಗಳಲ್ಲಿ ಮುಂದುವರಿಯುತ್ತಲಿವೆ. ಈ ಕಾರ್ಯಕ್ರಮಗಳನ್ನು ಆದಷ್ಟು ಬೇಗನೆ ಮುಗಿಸಲು ಸರ್ವಪ್ರಯತ್ನ ಮಾಡ ಲಾಗುವುದು.

ನೀರಾವರಿ

ಆದಷ್ಟು ಬೇಗನೆ ಸ್ವಲ್ಪ ಮಟ್ಟಿಗಾದರೂ ನೀರಾವರಿ ಸೌಕರ್ಯ ದೊರೆಯಲು ಅನುಕೂಲವಾಗುವ ರೀತಿಯಲ್ಲಿ ಹಣ ಹಂಚಿಕೆಯಾಗುವಂತೆಯೂ, ಕೆಲಸದ ವ್ಯವಸ್ಥೆ ನಡೆಯುವಂತೆಯೂ ನೀರಾವರಿ ಯೋಜನೆಗಳ ಬಗ್ಗೆ ಸಮನ್ವಯ ಪೂರ್ಣ ಯೋಜನೆ ಯೊಂದನ್ನು ಸಿದ್ಧಪಡಿಸಲಾಗಿದೆ. ಘಟಪ್ರಭಾ, ಮಲಪ್ರಭಾ, ಕಬಿನಿ ಮತ್ತು ಹೇಮಾವತಿ ಯೋಜನೆಗಳು ತೃಪ್ತಿಕರವಾಗಿ ಪ್ರಗತಿ ಹೊಂದುತ್ತಲಿವೆ. ಇವುಗಳ ಪ್ರಗತಿಯನ್ನು ಇನ್ನಷ್ಟು ತ್ವರಿತಗೊಳಿಸಲಾಗುವುದು. ಗುಂಡಾಲ್, ತಾರಕಾ ಮತ್ತು ಹಾಥೀಕೋಣೆ ಯೋಜನೆಗಳ ಕೆಲಸವನ್ನು ಕೂಡಾ ಕೈಕೊಳ್ಳಲಾಗಿದೆ.

ವಿದ್ಯುಚ್ಛಕ್ತಿ

ಈ ವರ್ಷ ಶರಾವತಿ ಕಣಿವೆ ಯೋಜನೆಯ 8ನೆಯ ಘಟಕದಲ್ಲಿ ಕೆಲಸ ಪ್ರಾರಂಭವಾಗಿ, ವಿದ್ಯುಚ್ಛಕ್ತಿಯ ಒಟ್ಟು ಸ್ಥಾಪಿತ ಉತ್ಪಾದನ ಸಾಮರ್ಥ್ಯವನ್ನು 877.50 ಮೆಗಾವ್ಯಾಟುಗಳಿಂದ 966.5 ಮೆಗಾವ್ಯಾಟುಗಳಿಗೆ ಹೆಚ್ಚಿಸಲಾಗಿದೆ. 9ನೆಯ ಮತ್ತು 10ನೆಯ ಜನರೇಟರುಗಳು 1974ರಲ್ಲಿ ಕಾರ್ಯ ಪ್ರಾರಂಭ ಮಾಡುವ ನಿರೀಕ್ಷೆಯಿದೆ. ಕಾಳೀನದಿ ಜಲವಿದ್ಯುತ್ ಯೋಜನೆಯ ಮೊದಲನೆಯ ಹಂತದ ಕೆಲಸ ನಡೆಯುತ್ತಿದೆ. ಈ ಯೋಜನೆಯಲ್ಲಿ ತಲಾ 135 ಮೆಗಾವ್ಯಾಟುಗಳ ಎರಡು ಘಟಕಗಳಿವೆ. ಈ ಯೋಜನೆಯಿಂದ ವಿದ್ಯುಜ್ಜಾಲಕ್ಕೆ (ಗ್ರಿಡ್ ಸಿಸ್ಟಮ್) 1976ರ ಒಳಗಾಗಿ ವಿದ್ಯುಚ್ಛಕ್ತಿ ಹರಿಯುವ ನಿರೀಕ್ಷೆಯಿದೆ. ಕಾಳೀನದಿ ಯೋಜನೆಯನ್ನು ಬೇಗನೆ ಪೂರೈಸುವುದಕ್ಕೆ ಸಾಕಷ್ಟು ಸಂಪನ್ಮೂಲಗಳನ್ನು ಪಡೆಯಲು ಯತ್ನಿಸಲಾಗು ವುದು. ಗ್ರಾಮಾಂತರ ವಿದ್ಯುದ್ದೀಪ ಕಾರ್ಯಕ್ರಮವನ್ನು ತ್ವರಿತಗೊಳಿಸಿ, ಬರುವ ವರ್ಷಕ್ಕೆ ಈಗಾಗಲೇ ಗೊತ್ತುಪಡಿಸಿದ ಗುರಿಯನ್ನು ಸಾಧಿಸಲಾಗುವುದು.

ಸಂಪರ್ಕ ಸಾಧನಗಳು

ಜನರ ಹಾಗೂ ಸರಕಿನ ಸಾಗಾಟಕ್ಕೆ ಅನುಕೂಲಮಾಡುವ ಉದ್ದೇಶದಿಂದ, ರಸ್ತೆ ಸಂಚಾರ ಮಾರ್ಗಗಳನ್ನು ಇನ್ನಷ್ಟು ಸುಧಾರಿಸುವುದು ಅವಶ್ಯ. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕೆ ಇನ್ನಷ್ಟು ಹಣ ಒದಗಿಸಲಾಗುವುದು. ಲೆವೆಲ್ ಕ್ರಾಸಿಂಗುಗಳ ಬದಲಾಗಿ ಮೇಲುಸೇತುವೆ, ಅಡಿಸೇತುವೆಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವುದು.

ಕುಟುಂಬ ಯೋಜನಾ ಕಾರ್ಯಕ್ರಮ

ಜನಸಂಖ್ಯೆಯ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಕಾರ್ಯಕ್ರಮಕ್ಕೆ ಅಗ್ರ ಪ್ರಾಶಸ್ತ್ಯ ಕೊಡಬೇಕಾಗಿದೆ. ಭಾರತ ಜನಸಂಖ್ಯಾ ನಿಯಂತ್ರಣ ಯೋಜನೆಯ ಮೇರೆಗೆ ತೀವ್ರತರ ಕುಟುಂಬ ಯೋಜನಾ ಕಾರ್ಯಕ್ರಮಕ್ಕಾಗಿ ರಾಜ್ಯದಲ್ಲಿ ಐದು ಜಿಲ್ಲೆಗಳನ್ನು ಆರಿಸಿಕೊಳ್ಳಲಾಗಿದೆ. ಈ ಯೋಜನೆಯ ವಿವರಗಳನ್ನು ಬೇಗನೆ ಸಿದ್ಧಪಡಿಸಿ, ಮುಂದಿನ ವರ್ಷ ಕಾರ್ಯರೂಪಕ್ಕೆ ತರಲಾಗುವುದು. ಈ ಯೋಜನೆಯ ಮೇರೆಗೆ, ಹೆರಿಗೆ ಆಸ್ಪತ್ರೆಗಳು, ನಗರ ಪ್ರದೇಶಗಳ ಕುಟುಂಬ ಕಲ್ಯಾಣ ಕೇಂದ್ರಗಳು ತರಬೇತಿ ಸಂಸ್ಥೆಗಳು, ಒಳರೋಗಿಗಳಿಗೆ ಹೆಚ್ಚಿನ ಸ್ಥಳಾವಕಾಶ ವ್ಯವಸ್ಥೆ—ಇವುಗಳಿಗೆ ಬೇಕಾಗುವ ಹೆಚ್ಚಿನ ಕಟ್ಟಡಗಳನ್ನೂ ಸಜ್ಜು ಸಲಕರಣೆಗಳನ್ನೂ ಒದಗಿಸಲಾಗುವುದು.

ಸಮಾಜ ಕಲ್ಯಾಣ

ಮುಂದಿನ ಹನ್ನೆರಡು ತಿಂಗಳುಗಳಲ್ಲಿ ಹರಿಜನ-ಗಿರಿಜನರ ಕಲ್ಯಾಣ ಸಾಧನೆಗೆ ಇನ್ನಷ್ಟು ಹಣ ಒದಗಿಸಲಾಗುವುದು. ಹರಿಜನ-ಗಿರಿಜನರಿಗೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಹಾಗೂ ಪ್ರಾಥಮಿಕ ಸಾಲ ಮತ್ತು ಕೃಷಿ ಸಹಕಾರ ಸಂಘಗಳ ಸದಸ್ಯರಾಗುವುದಕ್ಕೂ ನೀರಾವರಿಗಾಗಿ ಮತ್ತು ನೀರಾವರಿ ಪಂಪ್ಪುಸೆಟ್ಟುಗಳಿಗಾಗಿ ಸಾಲ ಪಡೆಯುವುದಕ್ಕೂ ಅನುಕೂಲವಾಗುವಂತೆ, ಅವರಿಗೆ ಪ್ರಾರಂಭದ ಶೇರು ಶುಲ್ಕ, ಪ್ರವೇಶ ಶುಲ್ಕ, ಆನ್ವೇಷಣ ಶುಲ್ಕ ಮುಂತಾದ ಶುಲ್ಕಗಳನ್ನು ಪಾವತಿ ಮಾಡುವುದಕ್ಕೆ ಬೇಕಾಗುವ ಆರ್ಥಿಕ ನೆರವು ನೀಡಲು ಒಂದು ಯೋಜನೆಯನ್ನು ಮಂಜೂರು ಮಾಡಲಾಗಿದೆ.

ವಿದ್ಯಾಭ್ಯಾಸ ಮತ್ತು ಯುವಜನ ಸೇವೆ

ಈಗ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ಎಲ್ಲ ಮಕ್ಕಳೂ ಶಾಲೆಗೆ ಸೇರುವಂತೆ ಸರ್ಕಾರದವರು ಯತ್ನಿಸಲಿದ್ದಾರೆ. ಪ್ರಾಥಮಿಕ ಹಾಗೂ ಸೆಕೆಂಡರಿ ಹಂತಗಳಿರಡರಲ್ಲೂ ವಿಜ್ಞಾನ ಬೋಧನೆಗೆ ಹೆಚ್ಚಿನ ಗಮನ ಕೊಡ

ಲಾಗುವುದು. ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ನೀಡುವ ವ್ಯವಸ್ಥೆಯ ಜೊತೆಗೆ, ಸೆಕೆಂಡರಿ ಶಾಲೆಗಳಿಗೆ ಜಾಗತಿಕ ಆಹಾರ ಕಾರ್ಯಕ್ರಮದ ಪ್ರಕಾರ ಆಹಾರ ಒದಗಿಸಲಾಗುವುದು. ಕನ್ನಡದಲ್ಲಿ ಪಠ್ಯಪುಸ್ತಕಗಳ ಪ್ರಕಟನೆಗಾಗಿ ವಿಶ್ವವಿದ್ಯಾನಿಲಯಗಳಿಗೆ ಇನ್ನಷ್ಟು ನೆರವು ನೀಡಲಾಗುವುದು.

ಭಾರತ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಬೆಂಬಲದಿಂದ ಒಂದು ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಯನ್ನೂ, ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನ ಸಂಸ್ಥೆಯನ್ನೂ ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು.

ರಾಜ್ಯದಲ್ಲಿ ಆಟದ ಬಯಲುಗಳ ಮತ್ತು ಇತರ ಖಾಲಿ ಜಾಗದ ಅತಿಕ್ರಮಣ ಸದಾ ನಡೆಯುತ್ತಲಿದೆ. ಅಂಗಸಾಧನೆ ಹಾಗೂ ಕ್ರೀಡೆಗಳಿಗೆ ಸಾಕಷ್ಟು ಅವಕಾಶ ಒದಗಿಸುವುದು ಅವಶ್ಯ. ಆದುದರಿಂದ, ಆಟದ ಬಯಲುಗಳ ಮತ್ತು ಇತರ ಖಾಲಿ ಜಾಗದ ಸಂರಕ್ಷಣೆಗೆ ಶಾಸನ ರಚಿಸುವ ವಿಚಾರವನ್ನು ಪರಿಶೀಲಿಸಲಾಗುವುದು. ವಿದ್ಯಾ ಸಂಸ್ಥೆಗಳಲ್ಲಿ ಈಗ ನಡೆಯುವ ಯುವಜನ ಕಾರ್ಯಕಲಾಪಗಳಿಗೆ ನೆರವು ನೀಡುವುದರ ಜೊತೆಗೆ ವಿದ್ಯಾರ್ಥೀತರ ಯುವಜನರಿಗಾಗಿ ಕಾರ್ಯಕ್ರಮಗಳನ್ನು ಹೆಚ್ಚಿಸಲು ಅನೇಕಾನೇಕ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆ.

ಉದ್ದಿಮೆ

ಸ್ವಾವಲಂಬನ ನೀತಿಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ, ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿರುವ ಉತ್ಪಾದನ ಸಾಮರ್ಥ್ಯವನ್ನು ಸಾಧ್ಯವಿರುವ ಮಟ್ಟಿಗೂ ಪೂರ್ತಿಯಾಗಿ ಬಳಸಿಕೊಳ್ಳಬೇಕು. ಈ ದಿಶೆಯಲ್ಲಿ ರಾಜ್ಯದ ಉದ್ದಿಮೆ ಸಂಸ್ಥೆಗಳ ಕಾರ್ಯರೀತಿಯನ್ನು ಉತ್ತಮಪಡಿಸಲು ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳಲಿದ್ದಾರೆ.

ರಾಜ್ಯದಲ್ಲಿ ಹಿಂದುಳಿದ 11 ಜಿಲ್ಲೆಗಳಲ್ಲಿ ಹೊಸ ಉದ್ದಿಮೆಗಳನ್ನು ಪ್ರಾರಂಭಿಸುವ ಬಗ್ಗೆ ಉದ್ಯಮ ವ್ಯವಸ್ಥಾಪಕರಿಗೆ ಈಚೆಗೆ ಹೊಸ ಉತ್ತೇಜನಗಳನ್ನು ನೀಡಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಇದಕ್ಕೂ ಹೆಚ್ಚಿನ ಉತ್ತೇಜನಗಳನ್ನು ಮಂಜೂರು ಮಾಡಲಾಗಿದೆ. ಮಂಗಳೂರಿನಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆಯ ನಿರ್ಮಾಣವು ಬೇಗನೆ ಪ್ರಾರಂಭವಾಗಲಿದೆ. ರಾಜ್ಯದಲ್ಲಿ "ನೈಲಾನ್" ಕಾರ್ಖಾನೆಯ ಸ್ಥಾಪನೆಗೆ ಭಾರತ ಸರ್ಕಾರದವರು ಆಶಯ ಪತ್ರ (ಲೆಟರ್ ಆಫ್ ಇಂಟೆಂಟ್) ಹೊರಡಿಸಿದ್ದಾರೆ.

ರೇಶ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ಭಾರತ ಸರ್ಕಾರದವರು ಮಂಜೂರು ಮಾಡಿದ ತೀವ್ರ ಕಾರ್ಯಕ್ರಮವೊಂದನ್ನು 10 ವರ್ಷಗಳ ಅವಧಿಯಲ್ಲಿ ಕಾರ್ಯ

ರೂಪಕ್ಕೆ ತರಲಾಗುವುದು. ಈ ಕಾರ್ಯಕ್ರಮದಿಂದ, ಈ ಉದ್ದಿಮೆಯವರು ಕಚ್ಚಾ ರೇಶ್ಮೆಯ ಉತ್ಪಾದನೆಯನ್ನು ಇಮ್ಮಡಿಗೂ ಮಿಕ್ಕಿ ಹೆಚ್ಚಿಸುವುದಕ್ಕೂ ಸುಧಾರಿಸಿದ ತಳಿಗಳಿಗೆ ಗಮನಕೊಡುವುದಕ್ಕೂ ಸಾಧ್ಯವಾಗುವುದು.

ರಾಜ್ಯದ ಆರ್ಥಿಕ ಸ್ಥಿತಿ

ಐದನೆಯ ಆರ್ಥಿಕ ಆಯೋಗದ ಐತೀರ್ಪು (ಅವಾರ್ಡ್) ರಾಜ್ಯಕ್ಕೆ ಅನುಕೂಲವಾಗಿರಲಿಲ್ಲವೆಂಬ ಅಂಶವು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ರಾಜ್ಯದ ಒಟ್ಟು ಕೊರತೆಯ ಪರಿಸ್ಥಿತಿಗಳನ್ನು ಪುನಃ ಪರಿಶೀಲಿಸಬೇಕೆಂದೂ ಯೋಜನೆ ಮತ್ತು ಯೋಜನೇತರ ವೆಚ್ಚದ ಬಗ್ಗೆ ಹೆಚ್ಚಿನ ನೆರವು ನೀಡಬೇಕೆಂದೂ ರಾಜ್ಯಸರ್ಕಾರದವರು ಮಾಡಿಕೊಂಡ ಮನವಿಯನ್ನು ಪರಿಶೀಲಿಸಿದ ಮೇಲೆ, ಭಾರತ ಸರ್ಕಾರದವರು ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೊಂಚ ವಿಶೇಷ ಧನಸಹಾಯ ಒದಗಿಸಬೇಕಾಗಬಹುದೆಂಬ ತೀರ್ಮಾನಕ್ಕೆ ಬಂದರು. ಆದರೆ, ಈ ವಿಶೇಷ ನೆರವಿನ ಹಣದಲ್ಲಿ ವರ್ಷ ವರ್ಷ ಕೊಟ್ಟ ಹಣವಾದರೋ ರಾಜ್ಯದ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತಿಲ್ಲ. ಹೆಚ್ಚಿನ ಸಂಪನ್ಮೂಲ ಸಂಗ್ರಹಕ್ಕಾಗಿ ಗೊತ್ತುಪಡಿಸಿದ ಗುರಿಯನ್ನು ರಾಜ್ಯವು ಈಗಾಗಲೇ ಸಾಧಿಸಿದೆ. ವಾಡಿಕೆಯ ವರಮಾನದಲ್ಲಿ ಗಣನಾರ್ಹ ಏರಿಕೆಯುಂಟಾಗಿರುವುದೇನೋ ನಿಜ; ಆದರೂ ಕೂಡ, ವೆಚ್ಚದಲ್ಲಿ ಉಂಟಾದ ವಾಡಿಕೆಯ ಹೆಚ್ಚಳ, ಇನ್ನೂ ಒಪ್ಪಿಗೆ ಪಡೆದಿಲ್ಲದ ನೀರಾವರಿ ಯೋಜನೆಗಳ ವೆಚ್ಚ ಹಾಗೂ ನೌಕರರ ವೇತನಗಳಲ್ಲಿ ಉಂಟಾದ ಅನಿವಾರ್ಯ ಹೆಚ್ಚಳ—ಇವುಗಳನ್ನು ತುಂಬಿಕೊಳ್ಳಲು ಸಾಧ್ಯವಾಗಿರಲಿಲ್ಲ. ಪೂರ್ತಿ ಯೋಜನಾವಧಿಯಲ್ಲಿ 45 ಕೋಟಿ ರೂಪಾಯಿಯಷ್ಟು ಸಾಲದ ಮರುಪಾವತಿಯು ನಿಮಿತ್ತ ಹೆಚ್ಚಿನ ಹೊರೆ ಹೊರಬೇಕಾಗಿದೆ. ಇದರಿಂದ ನಮ್ಮ ಸಮಸ್ಯೆ ಇನ್ನಷ್ಟು ಉಲ್ಬಣವಾಗಿದೆ. ಸಂಗ್ರಹಿಸಿದ ಹೆಚ್ಚಿನ ಸಂಪನ್ಮೂಲಗಳು ಈ ಕೊರತೆ ತುಂಬಲು ಸಾಲದಾಗಿವೆ. ಪರಿಸ್ಥಿತಿ ಹೀಗಿರುವುದರಿಂದ, ಓವರ್‌ಡ್ರಾಫ್ಟ್ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಬಗೆಹರಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ, ವಿಶೇಷ ಸಹಾಯ ನೀಡಬೇಕೆಂದು ಮೈಸೂರು ಮಾಡಿಕೊಂಡ ಮನವಿಯನ್ನು ಭಾರತ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವುದು ಅಗತ್ಯವಾಗಿದೆ.

ಮೈಸೂರು, ಮೊದಲಾದ ರಾಜ್ಯಗಳಲ್ಲಿ ಓವರ್‌ಡ್ರಾಫ್ಟ್ ಹೆಚ್ಚುತ್ತಿರುವ ವಿಚಾರದಲ್ಲಿ ಭಾರತ ಸರ್ಕಾರದವರು ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಈ ಸಮಸ್ಯೆಯನ್ನು ವಾಸ್ತವಿಕ ದೃಷ್ಟಿಯಿಂದ ಗಮನಿಸಬೇಕಾಗಿದೆ. ಈ ವಿಚಾರದಲ್ಲಿ ಯಾವುದೇ ಸೂತ್ರವನ್ನು ಅನ್ವಯಿಸುವಾಗ ಪ್ರತಿಯೊಂದು ರಾಜ್ಯದ ವಿಶಿಷ್ಟ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆರ್ಥಿಕ ಶಿಸ್ತನ್ನು ಜಾರಿಗೆ ತರಲು ಭಾರತ ಸರ್ಕಾರದವರು ಮಾಡುತ್ತಿರುವ ಯತ್ನದಲ್ಲಿ, ರಾಜ್ಯ ಸರ್ಕಾರದವರು ತಮ್ಮ ಪಾತ್ರವನ್ನು ಪೂರ್ತಿಯಾಗಿ

ನಿರ್ವಹಿಸಿ ಸಹಕಾರ ನೀಡುತ್ತಾರೆ. ಅದೇ ಕಾಲಕ್ಕೆ ತಮ್ಮ ನಿಜವಾದ ತೊಂದರೆಗಳನ್ನು ಗಮನಕ್ಕೆ ತೆಗೆದುಕೊಳ್ಳುವಂತೆ ಭಾರತ ಸರ್ಕಾರದವರನ್ನು ಒತ್ತಾಯ ಪಡಿಸುತ್ತಾರೆ.

ಅಭಿವೃದ್ಧಿ ಕಾರ್ಯಕಲಾಪಗಳು ಈಗಿನ ವೇಗದಲ್ಲಿ ಮುಂದುವರಿಯ ಬೇಕಾದರೆ, ಇನ್ನಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗುವುದು.

ವೆಚ್ಚ ನಿಯಂತ್ರಣದ ಅಗತ್ಯವನ್ನು ಸರ್ಕಾರದವರು ಪೂರ್ತಿಯಾಗಿ ಅರಿತವ ರಾಗಿದ್ದಾರೆ. ಕೆಲವಾರು ಮಿತವ್ಯಯ ವ್ಯವಸ್ಥೆಗಳನ್ನು ಈಗಾಗಲೇ ಜಾರಿಗೆ ತರಲಾಗಿದೆ. ಆಡಳಿತ ವೆಚ್ಚವನ್ನು ತ್ವರಿತವಾಗಿ ಪರಿಶೀಲಿಸಿ, ಮಿತವ್ಯಯವನ್ನು ಯಾವ ಬಗೆಯಲ್ಲಿ ಸಾಧಿಸಬಹುದೆಂಬುದನ್ನು ಸೂಚಿಸುವುದಕ್ಕಾಗಿ ಏಕಸದಸ್ಯ ಮಿತವ್ಯಯ ಸಮಿತಿ ಯೊಂದನ್ನು ರಚಿಸಲಾಗಿದೆ

ಶಾಸನ ನಿರ್ಣಯ

ಈ ಮುಂದಿನ ಶಾಸನಗಳನ್ನು ರಾಷ್ಟ್ರಪತಿಯವರ ಅಧಿನಿಯಮಗಳನ್ನಾಗಿ ನಿರ್ಣಯಿಸಲಾಗಿದೆ :—

1. ಮೈಸೂರು ಮನೋರಂಜನ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ 14/1971).

2. ಮೈಸೂರು ಮೋಟಾರು ವಾಹನಗಳ ಸಂಬಂಧವಾದ (ಪ್ರಯಾಣಿ ಕರ ಮತ್ತು ಸರಕಿನ ಮೇಲಿನ) (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ, 15/1971).

3. ಮೈಸೂರು ಮೋಟಾರು ವಾಹನಗಳ ಸಂಬಂಧವಾದ ತೆರಿಗೆ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ 16/1971).

4. ಮೈಸೂರು ಮುದ್ರಾಂಕ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ 17/1971).

5. ಮೈಸೂರು ಮಾರಾಟ ತೆರಿಗೆ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1971 (ರಾಷ್ಟ್ರಪತಿಯವರ ಅಧಿನಿಯಮ 18/1971).

6. ಮೈಸೂರು ಸಹಕಾರಿ ಸಂಘಗಳ ಸಂಬಂಧವಾದ (ತಿದ್ದುಪಡಿ) ಅಧಿನಿಯಮ, 1972 (ರಾಷ್ಟ್ರಪತಿಯವರ ಅಧಿನಿಯಮ 1/1972).

ಇವುಗಳ ಪೈಕಿ ಅಗತ್ಯವಿರುವ ಶಾಸನಗಳ ಬದಲಾಗಿ ವಿಧೇಯಕಗಳನ್ನು ನಿಮ್ಮ ಮುಂದೆ ಕಾಲಕ್ರಮದಲ್ಲಿ ಮಂಡಿಸಲಾಗುವುದು.

ನಮ್ಮ ರಾಷ್ಟ್ರವು ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಮಾಜವಾದಕ್ಕೆ ಬದ್ಧವಾಗಿದೆ. ದೇಶದಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಈ ತತ್ವಗಳ ನಿರ್ದುಷ್ಟತೆಯನ್ನು ಸಮರ್ಥಿಸಿವೆ. ಬಡತನ ಮಾಯವಾಗಬೇಕಾದರೆ, ಅಸಮತೆಗಳು ಕಡಿಮೆಯಾಗಬೇಕಾದರೆ, ಅನ್ಯಾಯಗಳು ದಮನಹೊಂದಬೇಕಾದರೆ, ಸ್ವಾವಲಂಬನೆಯ ಆಧಾರದ ಮೇಲೆ ಸೂಕ್ತವಾದ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತಂದು ಈ ಆದರ್ಶಗಳನ್ನು ಸಾಧಿಸುವ ನಿಮಿತ್ತ ನಿರಂತರವಾಗಿ ದುಡಿಯಲು ಸಂಬಂಧಪಟ್ಟವರೆಲ್ಲರೂ ಪ್ರಯತ್ನಿಸಬೇಕು.

ನಿಮ್ಮ ಕಾರ್ಯಕಲಾಪಗಳೂ ನಮ್ಮ ಆದರ್ಶಸಾಧನೆಗಾಗಿ ಮತ್ತು ರಾಜ್ಯದ ಜನತೆಯ ನಿರಂತರ ಪ್ರಗತಿ ಹಾಗೂ ಶ್ರೇಯೋಭಿವೃದ್ಧಿಗಾಗಿ ನೀವು ನಡೆಸುವ ಪ್ರಯತ್ನಗಳೂ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

'ಜೈ ಹಿಂದ್'

Secretary'3 Report

SECRETARY.—I beg to lay on the Table a statement showing the Bills which have received the assent of the Governor or the President, as the case may be, subsequent to the Report made during the previous session.

Statement showing the Bills assented to by the Governor or the President.

Sl. No.	Name of the Bill	Date of Assent	Assented by
1	The Mysore Rent Control (Amendment) Bill, 1970.	17-12-1970	President
2	The Mysore Excise (Second Amendment) Bill, 1970.	20-1-1971	President